**ಪಿ. ಡಬ್ಲ್ಯೂ: 1**

**( ಇಂದು ದಿಃ 22 /11/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿಎನ್ ವಕೀಲರಿಂದ,**

ಆರೋಪಿಗೆ ಸಾಲ ನೀಡುವಾಗ ನಾನು ಪಿರ್ಯಾದಿ ಸಂಸ್ಥೆಯಲ್ಲಿ ನಾನು ಮ್ಯಾನೇಜರ್ ಆಗಿರಲಿಲ್ಲ ಆದರೆ ಸಿಬ್ಬಂದಿ ಆಗಿದೆ. ಪಿರ್ಯಾದಿ ಸಂಸ್ಥೆ ಕಾನೂನಿನ ಅಡಿ ನೊಂದಣಿ ಆಗಿದೆ ಆದರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಸದರಿ ಪ್ರಕರಣ ನಡೆಸಲು ನಿರ್ದೇಶಕರ ಮಂಡಳಿಯಲ್ಲಿ ಠರಾವು ಆದ ಬಗ್ಗೆ ದಾಖಲೆ ಇದೆ ಆದರೆ ನ್ಯಾಯಾಲಯಕ್ಕೆ ಠರಾವಿನ ಪ್ರತಿಯನ್ನು ಹಾಜರುಪಡಿಸಿಲ್ಲ ಹಾಗೆ ಹಾಜರುಪಡಿಸಲು ತೊಂದರೆ ಇಲ್ಲ. ನಿಪಿ-1 ನ್ನು ನಾನೇ ಬರೆದು ಸಹಿ ಮಾಡಿಸಿ ತಂದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ಸಂಸ್ಥೆಯ ಅಧ್ಯಕ್ಷರ ಗಮನಕ್ಕೆ ತಂದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಗೃಹ ಬಳಕೆ ಸಾಲ ನೀಡಿರುತ್ತೇವೆ. ಆರೋಪಿಗೆ ರೂ. 50,000 ಸಾಲ ನೀಡಿದ್ದು ಅದರಲ್ಲಿ ರೂ. 10,000 ಎಪ ಡಿ ಅನ್ನು ನಾವೇ ಇಟ್ಟು ಕೊಂಡಿರುತ್ತೇವೆ. ರೂ. ಎರಡುವರೆ ಸಾವಿರ ಷೇರಿನ ಮೊತ್ತವನ್ನು ನಾವೇ ಇಟ್ಟುಕೊಂಡಿರುತ್ತೇವೆ. ಆರೋಪಿಗೆ ಒಟ್ಟು ಮೂವತ್ತೇಳುವರೆ ಸಾವಿರ ಸಾಲ ನೀಡಿರುತ್ತೇವೆ. ಆರೋಪಿಯು ಹಂತಹಂತವಾಗಿ ರೂ. 25,000 ಸಾಲವನ್ನು ಕಟ್ಟಿರುತ್ತಾರೆ. ಆರೋಪಿಯು ಈ ಮೊದಲು ನಮ್ಮ ಸಂಸ್ಥೆಯಲ್ಲಿ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಆರೋಪಿಯು ನಮಗೆ ದಿಃ 26.03.2021 ರಂದು ಚೆಕ್ಕನ್ನು ನಮಗೆ ನೀಡಿದ ಬಗ್ಗೆ ದಾಖಲಾತಿಗಳು ನಮ್ಮ ಸಂಸ್ಥೆಯಲ್ಲಿ ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಹಾಜರುಪಡಿಸಬಹುದು. ದಿಃ 26.03.2021 ರಂದು ವಿಜಯ ಬ್ಯಾಂಕ್ ಬ್ಯಾಂಕ್ ಅಪ್ ಬರೋಡಾದಲ್ಲಿ ವಿಲೀನ ಗೊಂಡಿದೆ ಎಂದರೆ ಆದರೆ ಚೆಕ್ಕು ಮಾನ್ಯತೆಯಲ್ಲಿತ್ತು ಎಂದು ಉತ್ತರಿಸಿರುತ್ತಾರೆ. ಆರೋಪಿಯು ಚೆಕ್ಕನ್ನು ಬ್ಯಾಂಕಿನಲ್ಲಿ ಪಾಸು ಆಗುತ್ತದೆಂದು ಕೊಟ್ಟಿದ್ದರು. ಆರೋಪಿಯು ಚೆಕ್ಕನ್ನು ಬರೆದುಕೊಂಡು ತಂದಿದ್ದರು. ಚೆಕ್ಕಿನ ಮೇಲೆ ಇರುವ ಸಹಿಯು ಕಪ್ಪು ಬಣ್ಣದ್ದು ಆಗಿದೆ ಮತ್ತು ಉಳಿದ ಅಕ್ಷರ ನೀಲಿ ಬಣ್ಣದ್ದು ಆಗಿದೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಅಕ್ಷರದಲ್ಲಿ ಶಾಹಿಯ ವ್ಯತ್ಯಾಸ ಇದೆ ಎಂದು ನಾವು ವಿಚಾರಣೆ ಮಾಡಿಲ್ಲ. ಸದರಿ ಸಾಲದ ಜಾಮೀನುದಾರರಿಗೆ ನೊಟೀಸನ್ನು ನಿಡಿರುತ್ತೇವೆ. ಆರೊಪಿಯು ನಮ್ಮ ಸಂಸ್ಥೆಯಲ್ಲಿ ಪಡೆದ ಸಾಲ ಸಂಪೂರ್ಣ ಚುಕ್ತಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಈ ಮೊದಲು ಪಡೆದ ಸಾಲಕ್ಕೆ ಭದ್ರತೆಗಾಗಿ ನಿಪಿ- 2 ಚೆಕ್ಕನ್ನು ನೀಡಿದ್ದರು ಎಂದರೆ ಸರಿಯಲ್ಲ. ಸಾಲ ಮರುಪಾವತಿ ಆದ ನಂತರ ಚೆಕ್ಕು ವಾಪಸ್ಸು ನೀಡಿದ್ದರು ಆದರೂ ನಾವು ಮರಳಿಸಿಲ್ಲ ಎಂದರೆ ಸರಿಯಲ್ಲ. ಹಿಂದಿನ ಸಾಲದ ಭದ್ರತೆಗಾಗಿ ಪಡೆದ ಚೆಕ್ಕನ್ನು

ದುರುಪಯೋಗಪಡಿಸಿ ಆರೊಪಿ ವಿರುದ್ಧ ಸುಳ್ಳು ಪ್ರರಕಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಸಹಿಯನ್ನು ಹೊರತುಪಡಿಸಿ ಉಳಿದೆಲ್ಲಾ ಬರವಣಿಗೆ ನಮ್ಮ ಸಿಬ್ಬಂದಿಯದು ಎಂದರೆ ಸರಿಯಲ್ಲ. ಸಾಲ ಕಟ್ಟು ಬಾಕಿ ಆದಾಗ ಆರೋಪಿಗೆ ನೊಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ– 6 ಇದರಲ್ಲಿ ಇರುವ ಸಹಿ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಹಣ ನೀಡಲು ಬಾಕಿ ಇಲ್ಲದಿದ್ದರೂ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ದಾಖಲಿಸಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳು ಸೃಷ್ಟಿ ಮಾಡಿರುವ ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**